ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಆರತಿಗೊಬ್ಬ ಮಗಳು, ಕೀರುತಿಗೊಬ್ಬ ಮಗ. ರಾಜಕೀಯಕ್ಕೊಬ್ಬ...?



ಹೆಬ್ಬೆಟ್ ಹೆಂಡ್ತಿ.

ಎಸ್.ಎನ್. ಮಹಾಬಲರಾವ್, ಎನ್ಆರ್‌ಪುರ
ಮದುಮಕ್ಕಳಿಗೆ ಅಕ್ಕಿಕಾಳು ಹಾಕುತ್ತಾರೆ; ಮಸಣದಲ್ಲಿ ಲೀನವಾಗುವವರಿಗೂ ಹಾಕುತ್ತಾರಲ್ಲಾ?
ಸ್ಥಳವ್ಯತ್ಯಾಸವಿದೆಯಲ್ಲ; ತಲೆಗೆ ಹಾಕುವುದು ತಲೆ ಕಾಯಲು; ಬಾಯಿಗೆ ಹಾಕುವುದು ಬಾಯ್‌ಬಾಯ್ ಹೇಳಲು.

ಮಹಾವೀರ ಕಾಸರ, ಶಿವಮೊಗ್ಗ
ತಮ್ಮ ಮುಂದೆ ನೂರಾರು ಸೀರೆಗಳನ್ನು ಹರಡಿದಾಗಲೂ ಅನ್ಯರ ಮುಂದಿರುವ ಸೀರೆಯನ್ನೇ ಇಷ್ಟ ಪಡುವರಲ್ಲಾ...?
ಹ್ಞ! ಅನ್ಯರ ಹೆಂಡತಿಯನ್ನೇ ಬಯಸುವ ಗಂಡಿಗೆ ಹೋಲಿಸಿದರೆ ಇದು ನಗಣ್ಯ.

ಬಿ. ಬೋರೇಗೌಡ, ಸರಸ್ವತಿಪುರ
ಸತ್ಯವನ್ನು ಕಂಡುಹಿಡಿಯುವ ಮಾರ್ಗ ಯಾವುದು ಗುರುಗಳೆ?



ಕ್ಷಮಿಸಿ. ಗಾಂಧಿಗೆ ಗುಂಡು ಹೊಡೆದಾಗಲೇ ಆ ಮಾರ್ಗ ಬಂದ್ ಆಗಿಹೋಯಿತು.

ವಿ. ಹಮೀದ್, ವಿಟ್ಲ
ಹಳೆಯ ಲವರ್‌ಗೂ, ಹಾಲಿ ಲವರ್‌ಗೂ ಇರುವ ವ್ಯತ್ಯಾಸವೇನು?
ಅವಳು ಮಾಸದ ಗಾಯ; ಇವಳು ಈ ಮಾಸದ ಗಾಯನ.

ಮುರಲೀಧರ ಕುಲಕರ್ಣಿ, ಬೀದರ್
ಜ್ಯೋತಿಷಿಗಳ ಪ್ರಕಾರ ಗ್ರಹಣಗಳು ಬರೀ ಕೆಡುಕನ್ನೇ ಉಂಟು ಮಾಡುತ್ತವೆಯೆ?
ಇತರರಿಗೆ ಮಾತ್ರ ಕೇಡು. ಸ್ವತಃ ಜ್ಯೋತಿಷಿಗೆ ಗ್ರಹಣದ ಸಮಯ ಹಣ ಪೀಕಲು Peak hour.

ಎನ್.ವಿ. ಶ್ರೀನಿವಾಸ್, ಮೈಸೂರು
ರಂಭೆ, ಊರ್ವಶಿ, ಮೇನಕೆಯರಿಗೆ ವಯಸ್ಸಾಯಿತಂತೆ ಸುದ್ದಿ ಬಂತೆ?
ಬಂತು; ಅದಕ್ಕೇ ಇಂದ್ರ ಸೌಂದರ್ಯ, ಮರ್ಲಿನ್ ಮನ್ರೋ, ದಿವ್ಯಾಭಾರತಿಯನ್ನು ಬೇಗ ಕರೆಸಿಕೊಂಡದ್ದು.

ಚೆನ್ನವೀರಪ್ಪ ಬಿದರಹಳ್ಳಿ, ಹೂವಿನಹಡಗಲಿ
ಪುಣ್ಯದ್ದು ಮನುಷ್ಯರಿಗೆ, ಪಾಪದ್ದು ದೇವರಿಗೆ. ಹೌದಾ?
ತಪ್ಪು ಶಿವನದೇ. ಹಾಲಾಹಲವನ್ನು ಸ್ವಯಂ ಸ್ವೀಕರಿಸಿದ ದೇವನಿಗೆ ಅದೇ ಇಷ್ಟವೆಂದುಕೊಂಡು ಅದನ್ನೇ ಕೊಡುತ್ತಾರೆ.

ಗಂಜಾಂ ನಾಗರಾಜ, ಮೈಸೂರು
ಹುಟ್ಟಿದಾಗ ಮಗು ನಗಬಾರದೆ?
ಬಿಲ್ಲು ಹಿಡಿದ ವೈದ್ಯ, ಕತ್ತರಿ ಹಿಡಿದ ನರ್ಸ್ ಎದುರಿಗಿರುತ್ತಾರಲ್ಲ; ಸಾಧ್ಯವಿಲ್ಲ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಸ್ವಾಮೀಜಿಗಳಿಗೂ, ಋಷಿಗಳಿಗೂ ವ್ಯತ್ಯಾಸವೇನು?
ಸ್ವಾಮೀಜಿಗಳು ಮಠ ಜೀವಿಗಳು; ಋಷಿಗಳು ಕರ್ಮಠ ಜೀವಿಗಳು.

ವಿ. ಹೇಮಂತಕುಮಾರ್, ಬೆಂಗಳೂರು
ಗೃಹಿಣಿ ಇಲ್ಲದ ಮನೆ ಗೃಹವಲ್ಲ ಎನ್ನುತ್ತಾರಲ್ಲಾ....?
ನಿಜ. ಅದೊಂದು 'ಬ್ಯಾಚಲರ್ಸ್ ಪಾರ್ಟಿ' ನಡೆಯುವ ಅಡ್ಡಾ!

ಎಂ.ಜಿ. ಉಮಾ, ಬಳ್ಳಾರಿ
ದೇವರಿಗೇ ಸಂಕಟ ಬಂದರೆ?
'ಸಿಕ್ಕಿಕ್ ಕಡೆ ಪ್ರಸಾದ ತಿನ್ಬೇಡಿಂದ್ರೆ ಕೇಳಲ್ಲ. ಇಂಫೆಕ್ಷನ್ ಆಗಿದೆ' ಎನ್ನುತ್ತಾ ಧನ್ವಂತರಿ ಲೇಹ್ಯ ತಿನ್ನಿಸುತ್ತಾನೆ.

ದಿನೇಶ್, ಗುಡ್ಡದೂರು
ಇಂದಿನ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಭುಗಳು. ರಾಜಕಾರಣಿಗಳು?
ಪ್ರಜೆಗಳನ್ನು ಹೊತ್ತೊಯ್ಯುವ ಬೊಂಬುಗಳು, ಗಳಗಳು, ಚಟ್ಟಗಳು....

## ಬಹುಮಾನಿತ ಪ್ರಶ್ನೆ

ಅಮರಯ್ಯಾ ಪತ್ರಿಮಠ, ಸುರಪುರ
ಬ್ರಹ್ಮಚಾರಿಗೆ ಬ್ರಹ್ಮಗಂಟು ಬೀಳೋದ್ಯಾವಾಗ?
ಬ್ರಹ್ಮ ಹುಬ್ಬುಗಂಟು ಹಾಕಿಕೊಂಡು ಹಣೆಬರಹ ಬರೆದಿರುವ ಭಾಗ ಬಂದಾಗ.

ಎನ್. ವೈದೇಹಿ ಶೇಖರ್, ಮೈಸೂರು
ಅಪ್ಪ ಎಷ್ಟೇ ಆಸ್ತಿ ಮಾಡಿದ್ದರೂ ಮಕ್ಕಳು 'ಅಪ್ಪ ಅಮ್ಮ ನನಗೇನೂ ಮಾಡಿಲ್ಲ' ಎನ್ನುವುದೇಕೆ?
ಸೈಟ್ ಕೊಟ್ಟರೂ ಪ್ಯಾರಾ (ಪ್ರೀತಿಪಾತ್ರ) ಆಗದ ಪ್ಯಾರಾಸೈಟ್ ಜಾತಿಗೆ ಸೇರಿದವರಾದ್ದರಿಂದ.

ಎಚ್.ಎಂ. ಅನಂತಪದ್ಮನಾಭ, ಮೈಸೂರು
ವೈದ್ಯರ ತಪ್ಪುಗಳು ಹೂಳಲ್ಪಡುತ್ತವೆ; ವಕೀಲರ ತಪ್ಪುಗಳು ನೇಣಿಗೇರಿಸಲ್ಪಡುತ್ತವೆ; ಎಂಜಿನಿಯರ್‌ಗಳ ತಪ್ಪುಗಳು?
ಕೊಚ್ಚಿಹೋಗುತ್ತವೆ, ಭ್ರಷ್ಟತೆಯ ಕಡತಗಳಲ್ಲಿ ಮುಚ್ಚಿಹೋಗುತ್ತವೆ.

ವಿಜಯಾ ಚನ್ನವೀರಪ್ಪ, ಹಿರೇಹಡಗಲಿ
ಕಳ್ಳನಾಗಿ ಬಾಳಬೇಕು, ಸಂತನಾಗಿ ಸಾಯಬೇಕಂತೆ. ಹೌದಾ?



ಕರೆಕ್ಟ್; ಇದ್ದಷ್ಟು ದಿನ ಮನ, ಹೃದಯ ಕದ್ದು, ಮುಂದಿನ ಪೀಳಿಗೆಗೆ (ವ)ಸಂತನಾಗಿ ಸಾಯಬೇಕು.

ಗಣೇಶ ಎಂ. ಪೈ, ಬೆಂಗಳೂರು
ನನ್ನ ಹೆಂಡತಿ ಪಾತ್ರೆ ಜೋಡಿಸುವ ಸದ್ದು ಇತ್ತೀಚೆಗೆ ಹೆಚ್ಚಾಗಿದೆ. ಇದರ ನಿವಾರಣೆ ಹೇಗೆ?
ಬಹಳ ಸುಲಭ... ತೊಳೆಯುವ, ಜೋಡಿಸುವ ಕೆಲಸವನ್ನು ನೀವೇ ಸದ್ದಿಲ್ಲದೆ ವಹಿಸಿಕೊಂಡುಬಿಡಿ.

ಕಣ್ಣೂರು ಗೋವಿಂದಾಚಾರಿ, ಮೈಸೂರು
ರಸ್ತೆಯಲ್ಲಿ ಬಿದ್ದಿರುವ ಹಣ್ಣನ್ನು ಎತ್ತಿಕೊಳ್ಳದ ಜನ ಹಣ ಕಂಡರೆ ಎತ್ತಿಕೊಳ್ಳಲು ಮುಗಿಬೀಳುವರಲ್ಲಾ...?
ಫಲ ಹಣ ನೀಡದು; ಆದರೆ ಹಣ ಫಲಪ್ರದವಾಗುವುದಲ್ಲ!

■ ರಾಮ್